ಮಾಡಬೇಕೆಂಬ ಚಿಂತನೆಗೆ ನಾವು ಚಾಲನೆ ಕೊಟ್ಟಿವು. ಆದರೆ ಈಗ ಪರಿಸ್ಥಿತಿಯನ್ನು ಅವಲಂಬಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಸಂಪನ್ಮೂಲಗಳು ಬಹಳ ಸೀಮಿತವಾಗಿವೆ. ಆದ್ದರಿಂದ ಮಾನ್ಯ ಸಚಿವರು ಹೇಳಿದಂತಹ ಪ್ರತಿ ಶಬ್ದವನ್ನೂ ಎಂಡಾರ್ಸ್ ಮಾಡಲು ನಾನು ನಿಂತಿದ್ದೇನೆ. ಡಿಮಾಂಡ್ ಸರ್ವೆ ಮಾಡದೆಯೇ ಅಲ್ಲೊಬ್ಬ ಅಧಿಕಾರಿಯನ್ನು ಪೋಸ್ಟ್ ಮಾಡಿ, ಅಲ್ಲಿ ಕೈಗಾರಿಕಾ ಎಸ್ಟೇಟ್ ಮಾಡಿ ಅಂದರೆ ಅಂತಹ ಸಂಪನ್ಮೂಲ ನಮ್ಮಲ್ಲಿಲ್ಲ. ಖಾಸಗಿ ಕ್ಷೇತ್ರದಲ್ಲಿ ಡಿಮಾಂಡನ್ನು ಜನರೇಟ್ ಮಾಡಿದರೆ ಅದಕ್ಕೆ ಸ್ಪಂದಿಸಲಿಕ್ಕೆ ಸರ್ಕಾರದ ಸಣ್ಣ ಕೈಗಾರಿಕೆಗಳ ನಿಗಮವಿದೆ. ಏಕಾಯೇಕಿ ನೀವು ಇಂಡಸ್ಟ್ರೀಯಲ್ ಎಸ್ಟೇಟ್ ಕೇಳಿದರೆ ಖಂಡಿತವಾಗಿ ಕೊಡಲಿಕ್ಕೆ ಸಾಧ್ಯವಿಲ್ಲವೆಂಬ ನಿತ್ಯಸತ್ಯವನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎನ್.ಸಂಪಂಗಿ: ಇನ್ನೊಂದು ಪ್ರಶ್ನೆ ಇದೆ. 'ಆ' ಪ್ರಶ್ನೆಗೆ ಇಲ್ಲ ಎಂದಿದ್ದಾರೆ, ಆದರೆ ವಿಶ್ವ ಯೋಜನೆಯಡಿ 9 ಶೆಡ್‌ಗಳನ್ನು ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಮಿಸಿದ್ದರು. ಆ ಕಟ್ಟಡಗಳ ಬಾಗಿಲು ಜಿಂಕ್‌ಶೀಟ್‌ಗಳನ್ನು ಯಾರೋ ಕಿತ್ತು ಒಯ್ದಿದ್ದಾರೆ. ಇವತ್ತಿಗೂ ಅಧಿಕಾರಿಗಳು ಯಾರೂ ಹೋಗಿ ನೋಡಲಿಲ್ಲ. ಅವನ್ನು ರಕ್ಷಿಸುವ ಕೆಲಸ ಸರ್ಕಾರದ್ದಲ್ಲವೇ?

ಶ್ರೀ ಎಸ್ ಆರ್ ಕಾಶಪ್ಪನವರ್: ಕೆಎಸ್‌ಐಐಡಿಸಿ ಮೂಲಕ ಅಲ್ಲಿ ಕೈಗಾರಿಕಾ ಮಳಿಗೆ ಸ್ಥಾಪಿಸಿಲ್ಲ. ವಿಶ್ವ ಮಳಿಗೆಗಳ ಬಗ್ಗೆ ನನ್ನ ಗಮನ ಸೆಳೆದಿದ್ದೀರಿ, ನಾನು ತಕ್ಷಣ ಗಮನಹರಿಸಿ ಸೂಕ್ತಕ್ರಮ ಕೈಗೊಳ್ಳುತ್ತೇನೆ.

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೈಗಾರಿಕೆಗಳ ಅಭಿವೃದ್ಧಿ.

223(2479)

ಶ್ರೀ ಜಿ.ಎನ್.ನಂಜುಂಡಸ್ವಾಮಿ(ಕೊಳ್ಳೇಗಾಲ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕಿನ ಕೈಗಾರಿಕೆಗಳ ಅಭಿವೃದ್ಧಿಗೆ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಆ) ಕೊಳ್ಳೇಗಾಲ ತಾಲ್ಲೂಕಿನಲ್ಲಿನ ಕೈಗಾರಿಕೆಗಳ ಅಭಿವೃದ್ಧಿಗೆ ಕೆ.ಎಸ್.ಎಸ್.ಐ.ಡಿ.ಸಿ. ಇವರ ಈವರೆಗಿನ ಪಾತ್ರವೇನು?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) 1) ಸರ್ಕಾರದ ಹೊಸ ಕೈಗಾರಿಕಾ ನೀತಿ 2001-06ರನ್ವಯ ಕೊಳ್ಳೇಗಾಲ ತಾಲ್ಲೂಕನ್ನು ಕೈಗಾರಿಕೆಗಳಲ್ಲಿ ಹಿಂದುಳಿದ ಪ್ರದೇಶವೆಂದು ಪರಿಗಣಿಸಿ, ವಲಯ ಸಿ ರಲ್ಲಿ ಸೇರಿಸಲಾಗಿದೆ. ಈ ಹೊಸ ಕೈಗಾರಿಕಾ ನೀತಿಯಲ್ಲಿ ಕೆಳಕಂಡಂತೆ ಸಹಾಯ ಸೌಲಭ್ಯಗಳನ್ನು ನೀಡಲು ಅವಕಾಶವಿರುತ್ತದೆ.

ಅ) ಅತಿ ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸಹಾಯಧನವನ್ನು ಸ್ಥಿರಾಸ್ತಿ ಹೂಡಿಕೆಯ ಮೇಲೆ ಶೇಕಡ 20ರಂತೆ (ಗರಿಷ್ಟ ಮಿತಿ 10 ಲಕ್ಷ ರೂ.ಗಳು ಮೀರದಂತೆ) ಹಾಗೂ ಶೇಕಡ 5ರಂತೆ (ರೂ.1.00 ಲಕ್ಷ ಮೀರದಂತೆ ಹೆಚ್ಚುವರಿ ಸಹಾಯಧನ ಪರಿಶಿಷ್ಟ ಜಾತಿ ಪಂಗಡ ಮತ್ತು ಮಹಿಳಾ ಉದ್ದಿಮೆದಾರರಿಗೆ ನೀಡಲಾಗುವುದು.

ಆ) ಹೊಸ ಕೈಗಾರಿಕೆಗಳಿಗೆ ಪ್ರವೇಶ ತೆರಿಗೆ ವಿನಾಯಿತಿ, ಯಂತ್ರೋಪಕರಣ ಮತ್ತು ಇತರ ಸಲಕರಣೆ ಮೇಲೆ ಮೂರು ವರ್ಷ ಅವಧಿಗೆ ಯೋಜನೆ ಅನುಷ್ಠಾನಗೊಳಿಸುವ ಸಮಯದಲ್ಲಿ ಉತ್ಪಾದನೆ ಸಮಯದಲ್ಲಿ ಕಚ್ಚಾ ಮಾಲು ಖರೀದಿ ಮತ್ತು ಇತರ ಮೇಲೆ 5 ವರ್ಷ ಅವಧಿಯವರೆಗೆ ತೆರಿಗೆ ವಿನಾಯಿತಿ ನೀಡಲಾಗುವುದು.

ಇ) ಸಾಲ ಪತ್ರಗಳನ್ನು ನೋಂದಾಯಿಸಲು ಸ್ಟಾಂಪು ಶುಲ್ಕ ವಿನಾಯಿತಿ ಶೇಕಡ 100ರಷ್ಟು ಹಾಗೂ ನೋಂದಣಿ ಶುಲ್ಕ ರೂ. ಒಂದು ಪ್ರತಿ ಸಾವಿರಕ್ಕೆ

ಈ) ಅತಿ ಸಣ್ಣ:ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು 2 ಎಕರೆಯವರೆಗೆ ಭೂ ಪರಿವರ್ತನಾ ಶುಲ್ಕ ಮನ್ನ ಹಾಗೂ

ಉ) ರಫ್ತು ಆಧಾರಿತ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಗುವುದು.

2) ಚಾಮರಾಜನಗರದಲ್ಲಿ ಜಿ.ಎಸ್.ಎಸ್. ಸಂಸ್ಥೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇವುಗಳ ಸಂಯುಕ್ತ ಆಶ್ರಯದಲ್ಲಿ ಗ್ರಾಮೀಣ ಸ್ವಯಂ ಉದ್ಯೋಗ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಈ ಕೇಂದ್ರದಲ್ಲಿ ವಿದ್ಯಾವಂತ ಯುವಕಯುವತಿಯರಿಗೂ ಕೈಗಾರಿಕೆ ಮತ್ತು ಸೇವಾ ಚಟುವಟಿಕೆಗಳನ್ನು ಸ್ಥಾಪಿಸಲು ಉದ್ಯಮಶೀಲತೆ ತರಬೇತಿಯನ್ನು ನೀಡಲಾಗುವುದು. ಈ ಅವಕಾಶವನ್ನು ಕೊಳ್ಳೇಗಾಲ ತಾಲ್ಲೂಕಿನ ಭಾವಿ ಕೈಗಾರಿಕೋದ್ಯಮಿಗಳಿಗೆ ಕೂಡ

ನೀಡಲಾಗುವುದು.

3) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಉದ್ಯಮಿಗಳಿಗೆ ಬೇಕಾಗುವ ಕೈಗಾರಿಕಾ ನಿವೇಶನದ ಅಗತ್ಯಕತೆ ಬಗ್ಗೆ ಬೇಡಿಕೆಯ ಸಮೀಕ್ಷೆಯನ್ನು ನಡೆಸಲಾಗುವುದು. ಈ ಸಮೀಕ್ಷೆಯಲ್ಲಿ ಕೈಗಾರಿಕಾ ನಿವೇಶನಕ್ಕೆ ಬೇಡಿಕೆ ಇದ್ದರೆ ಸೂಕ್ತವಾದ ಭೂಮಿಯನ್ನು ಗುರುತಿಸಿ ಕೈಗಾರಿಕಾ ಪ್ರದೇಶ ಸ್ಥಾಪಿಸಲಾಗುವುದು.

4) ಚಾಮರಾಜನಗರ ಜಿಲ್ಲೆಯಲ್ಲಿ ಕೊಳ್ಳೇಗಾಲ ತಾಲ್ಲೂಕನ್ನು ಒಳಗೊಂಡಂತೆ ಒಂದು ಮುನ್ನೋಟ ಯೋಜನೆಯನ್ನು ತಯಾರಿಸಲಾಗುತ್ತಿದೆ. ಈ ಯೋಜನೆಯ ಪ್ರಕಾರ ಜಿಲ್ಲೆಯಲ್ಲಿ ಕೊಳ್ಳೇಗಾಲ ತಾಲ್ಲೂಕು ಒಳಗೊಂಡಂತೆ ಮುಂದಿನ 5 ವರ್ಷಗಳಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪಿಸಬಹುದು ಎಂದು ಗುರುತಿಸಲಾಗುತ್ತಿದ್ದು ಅದನ್ನು ಶೀಘ್ರದಲ್ಲೆ ಬಿಡುಗಡೆ ಮಾಡಲಾಗುವುದು ಹಾಗೂ ಜಿಲ್ಲೆಯ ಎಲ್ಲಾ ಭಾವಿ ಕೈಗಾರಿಕೋದ್ಯಮಿಗಳಿಗೆ ಲಭ್ಯವಾಗುವಂತೆ ಮುನ್ನೋಟ ಯೋಜನೆಯನ್ನು ಒದಗಿಸಲಾಗುವುದು. ಅದರಂತೆ ಯುವ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಸ್ಥಾಪನೆಗೆ ಸಲಹೆ ನೀಡಲಾಗುವುದು.

5) ಚಾಮರಾಜನಗರ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿನ ತಾಲ್ಲೂಕು ಕೈಗಾರಿಕಾ ಕೇಂದ್ರ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ಯಮಿಗಳಿಗೆ ಮಾರ್ಗದರ್ಶನ ಹಾಗೂ ವಿಶೇಷ ಪ್ರೋತ್ಸಾಹಕ ಸೌಲಭ್ಯಗಳನ್ನು ನೀಡುತ್ತಿವೆ.

ಆ) ಕೆ.ಎಸ್.ಎಸ್.ಐ.ಡಿ.ಸಿ. ಯವರು ಕೊಳ್ಳೇಗಾಲದ 7.48 ಎಕರೆ ಪ್ರದೇಶದ ಕೈಗಾರಿಕಾ ವಸಾಹತನ್ನು ಅಭಿವೃದ್ಧಿಪಡಿಸಿದೆ. 24 ವಿವಿಧ ಮಾದರಿಯ ಮಳಿಗೆ ಹಾಗೂ 16 ಫ್ಲಾಟುಗಳನ್ನು ಅಭಿವೃದ್ಧಿಪಡಿಸಿ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ.

ಶ್ರೀ ಜಿ.ಎನ್.ನಂಜುಂಡಸ್ವಾಮಿ: ಅಧ್ಯಕ್ಷರೇ, ಸಚಿವರು ನನ್ನ ಪ್ರಶ್ನೆಗೆ ಉತ್ತರಿಸದೆ ಅಭಿವೃದ್ಧಿ ಪಾಲಿಸಿ ಬಗ್ಗೆ ಉತ್ತರ ಕೊಟ್ಟಿದ್ದಾರೆ. 1-4-2001 ರಿಂದೀಚೆಗೆ ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲು ಅವರು ಕ್ರಮ ಕೈಗೊಂಡಿದ್ದಾರೆ? ಅದರಲ್ಲಿ ಹೂಡಿರುವ ಬಂಡವಾಳವೆಷ್ಟು? ಎಷ್ಟು ಉದ್ಯೋಗಗಳನ್ನು ಅದರಿಂದ ಸೃಷ್ಟಿಸಲಾಗಿದೆ ಎಂಬುದನ್ನು ಸಚಿವರು ತಿಳಿಸಬೇಕು.

ಶ್ರೀ ಎಸ್.ಆರ್.ಕಾಶಪ್ಪನವರ್: ಅಧ್ಯಕ್ಷರೇ, ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಈಗ ಹೊಸದಾಗಿ ಏನು ಪ್ರಶ್ನೆ ಕೇಳಿದ್ದೀರಿ ಅವುಗಳಿಗೆ ನಾನು ಮಾಹಿತಿ ತರಿಸಿಕೊಂಡು ಉತ್ತರ ನೀಡುತ್ತೇನೆ.